ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕೊರೊನಾ ವೈರಸ್-19

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 23/6/20

# ಲಕ್ಷ ಜನಸಾಂದ್ರತೆಗೆ ದೇಶದ ಸೋಂಕು ಸಂಖ್ಯೆ ಕಮ್ಮಿ

ಉ.ವಾ. 23/6/20

## ಕೇಂದ್ರ ಸರ್ಕಾರದ ಹೇಳಿಕೆ । ಗುಣ ಪ್ರಮಾಣ ಹೆಚ್ಚು

**ನವದೆಹಲಿ:** ಒಂದು ಲಕ್ಷ ಜನಸಂಖ್ಯೆಗೆ ಭಾರತದಲ್ಲಿರುವ ಸೋಂಕಿನ ಸಂಖ್ಯೆಯು ಜಗತ್ತಿನಲ್ಲೇ ಅತ್ಯಂತ ಕನಿಷ್ಠವಾಗಿದ್ದು ಅಧಿಕ ಜನಸಾಂದ್ರತೆಯಿದ್ದರೂ ಸೋಂಕಿನ ಸಂಖ್ಯೆ ಕಡಿಮೆಯಿರುವುದು ಸಮಾಧಾನದ ವಿಷಯವಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ವಿಶ್ವ ಆರೋಗ್ಯ ಸಂಸ್ಥೆ ಬಿಡುಗಡೆ ಮಾಡಿದ ಸದ್ಯದ ಕೊರೊನಾ ಪರಿಸ್ಥಿತಿ ಕುರಿತ ವರದಿಯನ್ನು ಉಲ್ಲೇಖಿಸಿ ಸಚಿವಾಲಯ ಈ ವಿಚಾರ ತಿಳಿಸಿದೆ. ಭಾರತದಲ್ಲಿ ಪ್ರತಿ ಒಂದು ಲಕ್ಷ ಜನಸಂಖ್ಯೆಗೆ 30.04 ಮಂದಿ ಸೋಂಕಿತರಿದ್ದಾರೆ. ಜಾಗತಿಕ ಮಟ್ಟದಲ್ಲಿ ಇದು ಸರಾಸರಿ 114.67 ಆಗಿದೆ. ಅಂದರೆ, ಭಾರತದಲ್ಲಿ ಜಾಗತಿಕ ಸರಾಸರಿಗಿಂತ ಸುಮಾರು 3 ಪಟ್ಟು ಕಡಿಮೆ ಮಂದಿಗೆ ಸೋಂಕು ತಗುಲಿದೆ ಎಂದು ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ. ಅಲ್ಲದೆ, ಇದು ಭಾರತ ಸರ್ಕಾರ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಕೊರೊನಾ ನಿಯಂತ್ರಿಸುವಲ್ಲಿ ಕೈಗೊಂಡ ಮುನ್ನೆಚ್ಚರಿಕಾ ಕ್ರಮಗಳ ಫ‌ಲ ಎಂದೂ ಅವರು ತಿಳಿಸಿದ್ದಾರೆ.

| ಯಾವ ದೇಶದಲ್ಲಿ ಎಷ್ಟು ಸೋಂಕಿತರು? (ಪ್ರತಿ 1 ಲಕ್ಷ ಜನಸಂಖ್ಯೆಗೆ) | |
|---|---|
| ಅಮೆರಿಕ | 671.24 |
| ಜರ್ಮನಿ | 583.88 |
| ಸ್ಪೇನ್ | 526.22 |
| ಬ್ರೆಜಿಲ್ | 489.42 |
| ಯು.ಕೆ. | 448.86 |
| ರಷ್ಯಾ | 400.82 |
| ಭಾರತ | 30.04 |

**ಗುಣಮುಖ ಪ್ರಮಾಣವೂ ಹೆಚ್ಚಳ:** ಭಾರತದಲ್ಲಿ ಗುಣಮುಖರಾದ ಸೋಂಕಿತರ ಸಂಖ್ಯೆ 2,37,195 ಆಗಿದ್ದು, 24 ಗಂಟೆಗಳ ಅವಧಿಯಲ್ಲಿ 9,440 ರೋಗಿಗಳು ಸಂಪೂರ್ಣ ಗುಣಮುಖರಾಗಿ ಮನೆಗೆ ಮರಳಿದ್ದಾರೆ. ದಿನಕಳೆದಂತೆ ಗುಣಮುಖ ಪ್ರಮಾಣ ಸುಧಾರಿಸುತ್ತಿದ್ದು, ಈಗ ಶೇ.55.77 ಕ್ಕೇರಿದೆ ಎಂದೂ ಸಚಿವಾಲಯ ಮಾಹಿತಿ ನೀಡಿದೆ. ಇದೇ ವೇಳೆ, ಕೊರೊನಾ ಪರೀಕ್ಷೆಯ ಮೂಲಸೌಕರ್ಯಗಳನ್ನೂ ಹೆಚ್ಚಿಸಲಾಗುತ್ತಿದೆ. ಜೂ.21ರವರೆಗೆ 69,50,493 ಸ್ಯಾಂಪಲ್‌ಗಳ ಪರೀಕ್ಷೆ ನಡೆದಿದೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ಹೇಳಿದೆ.

**10ನೇ ದಿನವೂ 10 ಸಾವಿರ ಮೀರಿದ ಸೋಂಕಿತರ ಸಂಖ್ಯೆ:** ಭಾನುವಾರ ಬೆಳಗ್ಗೆ 8ರಿಂದ ಸೋಮವಾರ ಬೆಳಗ್ಗೆ 8ರವರೆಗೆ ದೇಶಾದ್ಯಂತ 14,821 ಹೊಸ ಪ್ರಕರಣಗಳು ಬೆಳಕಿಗೆ ಬಂದಿವೆ. ಈ ಮೂಲಕ ಸತತ 11ನೇ ದಿನವೂ ದೇಶದಲ್ಲಿ ಸೋಂಕಿತರ ದೈನಂದಿನ ಸಂಖ್ಯೆ 10 ಸಾವಿರದ ಗಡಿ ದಾಟಿದಂತಾಗಿದೆ. 24 ಗಂಟೆಗಳ ಅವಧಿಯಲ್ಲಿ ಒಟ್ಟಾರೆ 445 ಮಂದಿ ಕೊರೊನಾ ಸೋಂಕಿಗೆ ಬಲಿಯಾಗಿದ್ದಾರೆ. ಈ ಪೈಕಿ 186 ಸಾವುಗಳು ಮಹಾರಾಷ್ಟ್ರವೊಂದರಲ್ಲೇ ಸಂಭವಿಸಿವೆ. ದೆಹಲಿಯಲ್ಲಿ 63, ತ.ನಾಡಿನಲ್ಲಿ 53, ಉತ್ತರಪ್ರದೇಶದಲ್ಲಿ [illegible], ಗುಜರಾತ್‌ನಲ್ಲಿ 25 ಮಂದಿ ಸಾವಿಗೀಡಾಗಿದ್ದಾರೆ.

**ಭಾನುವಾರ ವಿಶ್ವಾದ್ಯಂತ 1.83 ಲಕ್ಷ ಮಂದಿಗೆ ಸೋಂಕು:** ಭಾನುವಾರ ಜಗತ್ತಿನಾದ್ಯಂತ ಗರಿಷ್ಠ ಸಂಖ್ಯೆಯ ಪ್ರಕರಣಗಳು ಪತ್ತೆಯಾಗಿರುವುದಾಗಿ ವಿಶ್ವ ಆರೋಗ್ಯ ಸಂಸ್ಥೆ ಹೇಳಿಕೊಂಡಿದೆ. ವಿಶ್ವಾದ್ಯಂತ 1.83 ಲಕ್ಷಕ್ಕೂ ಹೆಚ್ಚು ಮಂದಿಗೆ ಸೋಂಕು ದೃಢಪಟ್ಟಿದ್ದು, ಈ ಪೈಕಿ 54,771 ಪ್ರಕರಣಗಳು ಬ್ರೆಜಿಲ್‌ವೊಂದರಲ್ಲೇ ವರದಿಯಾಗಿವೆ ಎಂದು ಡಬ್ಲ್ಯುಎಚ್‌ಒ ಹೇಳಿದೆ. ಅಮೆರಿಕದಲ್ಲಿ 36,617 ಹಾಗೂ ಭಾರತದಲ್ಲಿ 15,400 ಪ್ರಕರಣಗಳು ಭಾನುವಾರ ಪತ್ತೆಯಾಗಿದ್ದವು. ಇದೇ ವೇಳೆ, ಸೋಂಕಿತರ ಸಂಖ್ಯೆ ಹೆಚ್ಚಳವಾಗಲು ವ್ಯಾಪಕ ಕೊರೊನಾ ಪರೀಕ್ಷೆ ಹಾಗೂ ಕೊರೊನಾದ ಶರವೇಗದ ವ್ಯಾಪಿಸುವಿಕೆಯೇ ಕಾರಣ ಎಂದು ತಜ್ಞರು ಅಂದಾಜಿಸಿದ್ದಾರೆ.